**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಡಗು,ಮಡಿಕೇರಿ.**

**ಸಿ.ಸಿ.ಸಂಖ್ಯೆ : 230/2024**

| | | |
|---|---|---|
| ಫಿರ್ಯಾದಿ | : | ಕರ್ನಾಟಕ ರಾಜ್ಯ ಪರ ಮಡಿಕೇರಿ ನಗರ ಪೊಲೀಸ್ ಠಾಣೆ. |
| | | - ವಿರುದ್ಧ - |
| ಆರೋಪಿ | : | ಪುರುಷೋತ್ತಮ ಪಿ.ಎಸ್.,<br>ಪ್ರಾಯ 48 ವರ್ಷ,<br>ತಂದೆಃ ಶೇಷಪ್ಪ,<br>ವಾಸಃ ಕೂರ್ಗ್ ಕ್ಲಬ್ ಕ್ವಾರ್ಟರ್ಸ್,<br>ಪೊಲೀಸ್ ಠಾಣಾ ಹತ್ತಿರ, ಮಡಿಕೇರಿ. |

**ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 351 ರಡಿಯಲ್ಲಿ ಆರೋಪಿತನ ಹೇಳಿಕೆ**

ಪ್ರಶ್ನೆ 1: ಅಭಿಯೋಜನೆಯವರು ಇಲ್ಲಿಯವರೆಗೆ ಮಾಡಿದ ಸಾಕ್ಷಿಗಳ ಸಾಕ್ಷ್ಯವನ್ನು ಕೇಳಿರುತ್ತೀಯಾ?

ಉತ್ತರ :

ಪ್ರಶ್ನೆ 2: ಅ.ಸಾ-1, ದಿನೇಶ್ ಕುಮಾರ್ ಹೆಚ್.ಎಲ್., ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ02.06.2024 ರಂದು ಸಂಜೆ 7.00 ಗಂಟೆಗೆ ನಗರ ಮಡಿಕೇರಿ ನಗರ ಪೊಲೀಸರು ತನಗೆ ಫೋನ್ ಮಾಡಿ ಠಾಣೆಗೆ ಬರಲು ಕೇಳಿಕೊಂಡ ಮೇರೆಗೆ ತಾನು ಮತ್ತು ಚಾಸಾ 3 ರವರು ಸಂಜೆ 7.30 ಗಂಟೆಗೆ ನಗರ ಪೊಲೀಸ್ ಠಾಣೆಗೆ ಹೋದಾಗ, ಪೊಲೀಸರು ಮಹಜರ್ ಬರೆಯುವದಿದೆ ಪಂಚರಾಗಿ ಸಹಕರಿಸಿ ಎಂದು ಕೋರಿಕೊಂಡಿದ್ದು, ತನಗೂ ಮತ್ತು ಚಾಸಾ 3 ರವರಿಗೆ ಠಾಣೆಯಲ್ಲಿ ನಿಪಿ-1 ರಂತೆ ನೋಟೀಸ್ಸು ಕೊಟ್ಟಿದ್ದು, ಆ ನಂತರ ಪೊಲೀಸರು ತನ್ನನ್ನು ಮತ್ತು ಚಾಸಾ 3 ರವರನ್ನು ತಮ್ಮ ಇಲಾಖಾ ಜೀಪಿನಲ್ಲಿ ಓಂಕಾರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಇರುವ ಆದಾಯ ತೆರಿಗೆ ಕಚೇರಿ ಬಳಿ ಕರೆದುಕೊಂಡು ಹೋಗಿದ್ದು, ಆದಾಯ ತೆರಿಗೆ ಕಚೇರಿ ಪಕ್ಕದಲ್ಲಿ ಖಾಲಿ ಜಾಗ ಇದ್ದು, ಅಲ್ಲಿ ಆರೋಪಿ ನೀಲಿ ಬಣ್ಣದ ಪ್ಲಾಸ್ಟಿಕ್ ಬ್ಯಾಗಿನಲ್ಲಿ ಮದ್ಯದ ಮಾಲಿನ ಸ್ವಾಧೀನವನ್ನು ಹೊಂದಿದ್ದು, ನಂತರ ಪೊಲೀಸರು ಅವನನ್ನು ಹಿಡಿದು ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ಪುರುಷೋತ್ತಮ್ ಮಡಿಕೇರಿ ವಾಸಿ ಎಂದು ತಿಳಿಸಿದ್ದು, ಆರೋಪಿಯ ಕೈಯಲ್ಲಿ ಇರುವ ಬ್ಯಾಗಿನಲ್ಲಿ ಏನು ಇದೇ ಎಂದು ಹೇಳಲಾಗಿ ಅದರಲ್ಲಿ ಮದ್ಯದ ಮಾಲು ಇದೆ ಎಂದು ತಿಳಿಸಿದ್ದು, ಘಟನಾ ದಿನ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿ ಇದ್ದಿದ್ದರಿಂದ ಎಲ್ಲಾ ಬಾರ್ ಮತ್ತು ರೆಸ್ಟೋರೆಂಟ್ ಗಳು ಮುಚ್ಚಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 3: ಅ.ಸಾ-1 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ ಆರೋಪಿ ಬಳಿ ಇದ್ದ ಬ್ಯಾಗನ್ನು ತಮ್ಮ ಸಮಕ್ಷಮದಲ್ಲಿ ತೆರೆದು ನೋಡಲಾಗಿ ಅದರಲ್ಲಿ **180** ಎಂ.ಎಲ್ ನ ಬಿಜಾಯ್ಸ್ ಬ್ರ್ಯಾಂದಿ ಎಂದು **10** ಟೆಟ್ರಾ ಪ್ಯಾಕ್ ಗಳು ಇದ್ದು, ಸದರಿ ಮಾಲುಗಳನ್ನು ಸ್ವಾಧೀನ ಹೊಂದಲು ಪರವಾನಿಗೆ ಇದೇಯಾ ಎಂದು ಪೊಲೀಸರು ಆರೋಪಿಯ ಬಳಿ ಕೇಳಲಾಗಿ ಆತ ಯಾವುದೇ ಪರವಾನಿಗೆ ಇಲ್ಲ ಮತ್ತು ಅವುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ

ಹೊಂದಿದ್ದೇನೆ ಎಂದು ತಿಳಿಸಿದ್ದು, ಆರೋಪಿಯ ಅಂಗಶೋಧನೆ ಮಾಡಲಾಗಿ ಆತನ ಬಳಿ **100/-** ರೂ ಮುಖಾ ಬೆಲೆಯ **6** ನೋಟುಗಳು ಇದ್ದವು, ಸದರಿ ಹಣದ ಬಗ್ಗೆ ಆರೋಪಿ ಬಳಿ ವಿಚಾರಿಸಲಾಗಿ ಆತನ ಮದ್ಯದ ಪೌಚ್ ಗಳನ್ನು ಮಾರಾಟ ಮಾಡಿ ಬಂದ ಹಣ ಎಂದು ತಿಳಿಸಿದ್ದು, ಆರೋಪಿಯ ಸ್ವಾಧೀನದಲ್ಲಿದ್ದ ಮದ್ಯದ ಮಾಲು ಮತ್ತು ಹಣವನ್ನು ರಾತ್ರಿ **8.00** ಗಂಟೆಯಿಂದ **9.45** ವರೆಗೆ ನಿಪಿ**-2** ರಂತೆ ಮಹಜರ್ ಬರೆದು ಮಾಲನ್ನು ಅಮಾನತು ಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 4: ಅ.ಸಾ-1, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ಮಹಜರ್ ಕಾಲಕ್ಕೆ ಪೊಲೀಸರು ನಿಪಿ-3 ರಂತೆ ಫೋಟೋ ತೆಗೆದಿದ್ದು, ನಿಪಿ.**3** ರಲ್ಲಿ ಕಾಣುವ ಜಾಗ ಓಂಕಾರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಇರುವ ಇನ್‌ಕಮ್ ಟ್ಯಾಕ್ಸ್ ಕಚೇರಿಯ ಬಳಿ ಇರುವ ಜಾಗ ಆಗಿದ್ದು, ನಿಪಿ.3 ರಲ್ಲಿ ಆರೋಪಿ ಮಾಲು ಸಹಿತ ಇರುವುದು ಕಂಡು ಬಂದಿದ್ದು, ತಾನು ಘಟನೆ ಸಂಬಂಧ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದು, ಆರೋಪಿಯಿಂದ ಅಮಾನತು ಪಡಿಸಿದ 10 ಟೆಟ್ರಾ ಪ್ಯಾಕ್ ಗಳು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನೋಡಿ ಮು.ಮ 1 ರಿಂದ 10 ಎಂದು ಗುರುತಿಸಿದ್ದು, ಆರೋಪಿ ಮದ್ಯದ ಮಾಲುಗಳನ್ನು ಇಟ್ಟುಕೊಂಡಿದ್ದ ಪ್ಲಾಸ್ಟಿಕ್ ಕವರನ್ನು ನೋಡಿ ಮು.ಮ.11 ಎಂದು ಗುರುತಿಸಿದ್ದು, ಆರೋಪಿ ಸ್ವಾಧೀನದಿಂದ ಅಮಾನತು ಪಡಿಸಿದ 100/- ಮುಖ ಬೆಲೆ 6 ನೋಟುಗಳು ನ್ಯಾಯಾಲಯದ ಮುಂದೆ ಇದ್ದು ಅದನ್ನು ನೋಡಿ ಮು.ಮ 12 ಎಂದು ಗುರುತಿದ್ದು, ಆರೋಪಿ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 5: ಅ.ಸಾ-2, ಲೋಕೇಶ್,, ಇವರು ತಮ್ಮ ಸಾಕ್ಷ್ಯದಲ್ಲಿ, ದಿ:**02.06.2024** ರಂದು ಸಂಜೆ **7.20** ಗಂಟೆಗೆ ಇಲಾಖಾ ಜೀಪ್ ನಲ್ಲಿ ತಾನು, ಚಾಸಾ **4** ಮತ್ತು **5** ರವರು ನಗರದ ಗಸ್ತುಕಾರ್ಯದಲ್ಲಿ ಇದ್ದಾಗ, ಆ ದಿನ ನೈರುತ್ಯ ಪಧವೀದರ ಕ್ಷೇತ್ರದ ಚುನಾವಣೆ ನಿಮಿತ್ತ ಮಾನ್ಯ ಜಿಲ್ಲಾಧಿಕಾರಿಗಳು ಜಿಲ್ಲಾದ್ಯಂತ ಮದ್ಯಮಾರಾಟ ನಿಷೇಧ ಮಾಡಿ ಆದೇಶ ಹೊರಡಿಸಿದ್ದು, ಭಾತ್ಮಿಧಾರರು ತನಗೆ ಫೋನ್ ಮುಖಾಂತರ ತಿಳಿಸಿ ಓಂಕಾರೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆ ಬದಿಯಲ್ಲಿ ಪುರುಷೋತ್ತಮ ಎಂಬುವವರು ಅಕ್ರಮವಾಗಿ ಮದ್ಯಮಾರಾಟ ಮಾಡಿರುವುದಾಗಿ ತಿಳಿಸಿದ್ದು, ತಾನು ಕೂಡಲೆ ಠಾಣೆಗೆ ಬಂದು ಸದರಿ ಆಸಾಮಿ ವಿರುದ್ದ ದಾಳಿ ನಡೆಸಲು ನಿಪಿ-**4** ರಂತೆ ಸ್ವವರದಿಯನ್ನು ತಯಾರಿಸಿ ಠಾಣಾ ಗುನ್ನೆ ನಂ.**53/2024** ರಂತೆ ಕರ್ನಾಟಕ ಅಬಕಾರಿ ಕಲಂ **32** ಮತ್ತು **34** ರ ರೀತ್ಯ ಪ್ರಕರಣ ದಾಖಲಿಸಿ ನಿಪಿ-**5** ರಂತೆ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 6: ಅ.ಸಾ-2, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ನಂತರ ಚಾಸಾ **2** ಮತ್ತು **3** ರವರನ್ನು ಠಾಣೆಗೆ ಬರಮಾಡಿಕೊಂಡು ಅವರಿಗೆ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಿದ್ದು, ಅವರು ಒಪ್ಪಿದ ಮೇರೆಗೆ ಸದರಿಯವರಿಗೆ ನಿಪಿ-**1** ರಂತೆ ನೋಟೀಸ್ಸು ಜಾರಿ ಮಾಡಿದ್ದು, ಕೂಡಲೇ ಠಾಣೆಯಿಂದ ತಾನು, ಚಾಸಾ **2** ರಿಂದ **5** ರವರು ಇಲಾಖಾ ಜೀಪಿನಲ್ಲಿ ತನಗೆ ಮಾಹಿತಿ ಬಂದಿದ್ದ ಸ್ಥಳಕ್ಕೆ ತೆರಳಿ ಸ್ಥಳವನ್ನು ರಾತ್ರಿ **8.15** ಗಂಟೆಗೆ ತಲುಪಿದ್ದು, ಗೌಪ್ಯವಾಗಿ ವೀಕ್ಷಣೆ ಮಾಡಲಾಗಿ ಓಂಕಾರೇಶ್ವರ ದೇವಸ್ಥಾನದ ರಸ್ತೆಯ ತಿರುವಿನಲ್ಲಿ ಆದಾಯ ತೆರಿಗೆ ಕಚೇರಿಯ ಮುಂಭಾಗ ಒಬ್ಬ ಆಸಾಮಿ ನೀಲಿ ಬಣ್ಣದ ಬಟ್ಟೆ ಬ್ಯಾಗಿನಲ್ಲಿ ಏನೋ ತುಂಬಿಕೊಂಡು ಗ್ರಾಹಕರಿಗೆ ಮಾರಾಟ ಮಾಡಲು ಪ್ರಯತ್ನಿಸುತ್ತಿದ್ದು, ತಾನು ಮತ್ತು ತನ್ನ ಸಿಬ್ಬಂದಿಗಳು

ಆತನನ್ನು ಸುತ್ತುವರೆದು ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ಪುರುಷೋತ್ತಮ ಟಿ.ಎಸ್ ಬಿನ್ ಶೇಷಪ್ಪ ಮಡಿಕೇರಿ ವಾಸಿ ಎಂದು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 7: ಅ.ಸಾ-2, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ಆತನ ಕೈಯಲ್ಲಿದ್ದ ನೀಲಿ ಬಣ್ಣದ ಬ್ಯಾಗನ್ನು ಪಂಚರ ಸಮಕ್ಷಮದಲ್ಲಿ ಪರಿಶೀಲನೆ ಮಾಡಲಾಗಿ ಅದರಲ್ಲಿ 180 ಎಂ.ಎಲ್ ನ ಬಿಜಾಯ್ಸ್ ಎಂದು ಬರೆದಿದ್ದ 10 ಟೆಟ್ರಾ ಪ್ಯಾಕ್ ಗಳು ಇದ್ದು, ಸದರಿ ಮಾಲುಗಳನ್ನು ಸ್ವಾಧೀನ ಹೊಂದಲು ಪರವಾನಿಗೆ ಇದೆಯಾ ಎಂದು ಆರೋಪಿ ಬಳಿ ವಿಚಾರಿಸಿದಾಗ ಆತ ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಮತ್ತು ಅವುಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ ಹೊಂದಿದ್ದೇನೆ ಎಂದು ತಿಳಿಸಿದ್ದು, ಆರೋಪಿ ತನ್ನ ಬಳಿ ಮದ್ಯಮಾರಾಟ ಮಾಡಿ ಬಂದ ಹಣ ಇದೆ ಎಂದು ತನ್ನ ಬಲಗಡೆ ಪ್ಯಾಂಟಿನ ಜೇಬಿನಿಂದ 100 ರೂ ಮುಖಬೆಲೆಯ 6 ನೋಟುಗಳನ್ನು ಒಟ್ಟು 600 ರೂ ತೆಗೆದುಕೊಟ್ಟಿದ್ದು, ಆರೋಪಿಯು ಕರ್ನಾಟಕ ಅಬಕಾರಿ ಕಾಯಿದೆ ಕಲಂ.32 ಮತ್ತು 34 ರ ರಿತ್ಯ ಕೃತ್ಯವೆಸಗಿದ್ದು, ಆತನ ಬಳಿ ಇದ್ದ ಮಾಲು ಮತ್ತು ಹಣವನ್ನು ರಾತ್ರಿ 8.15 ರಿಂದ 9.35 ರವರೆಗೆ ನಿಪಿ-2 ರಂತೆ ಮಹಜರ್ ಬರೆದು ಅಮಾನತು ಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 8: ಅ.ಸಾ-2, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ಮಹಜರ್ ಕಾಲಕ್ಕೆ ನಿಪಿ-3 ರಂತೆ ಫೋಟೊ ಸಹ ತೆಗೆಯಲಾಗಿದ್ದು, ಅಲ್ಲಿ ದೊರೆತ 10 ಟೆಟ್ರಾ ಪ್ಯಾಕ್ ಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ಅರಗಿನ ಸಹಾಯದಿಂದ ಟಿ ಎಂಬ ಇಂಗ್ಲೀಷ ಅಕ್ಷರದಿಂದ ಮೋಹರು ಮಾಡಿದ್ದು, ಆರೋಪಿ ಹಾಜರು ಮಾಡಿದ 600 ರೂ ಹಣವನ್ನು ಒಂದು ಖಾಕಿ ಬಣ್ಣದ ಕವರಿಗೆ ಹಾಕಿ ಮೊಹರು ಮಾಡಿದ್ದು, ತನ್ನ ಮತ್ತು ಪಂಚರ ಸಹಿ ಇರುವ ಸಣ್ಣ ಚೀಟಿಗಳನ್ನು ತಯಾರಿಸಿ ಟೆಟ್ರಾ ಪ್ಯಾಕ್ ಗಳ ಮೇಲೆ ಅಂಟಿಸಿದ್ದು, ನಿಪಿ.3 ರಲ್ಲಿ ಕಾಣುವ ಜಾಗ ಆದಾಯ ತೆರಿಗೆ ಕಚೇರಿಯ ಬಳಿ ಯ ಜಾಗ ಆಗಿದ್ದು ಅದರಲ್ಲಿ ತಾನು, ಪಂಚಸಾಕ್ಷಿಗಳು ಮತ್ತು ಚಾಸಾ 4 ಮತ್ತು ಆರೋಪಿ ಇದ್ದು, ನಿಪಿ.3 ರಲ್ಲಿ ಆರೋಪಿ ಮಾಲುಗಳನ್ನು ಸ್ವಾಧೀನ ಹೊಂದಿರುವುದು ಕಂಡುಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 9: ಅ.ಸಾ-2, ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ನಂತರ ಆರೋಪಿ ಮತ್ತು ಮಾಲಿನೊಂದಿಗೆ ಠಾಣೆಗೆ ವಾಪಸ್ಸು ಆಗಿ ಆರೋಪಿಯನ್ನು ವಿಚಾರಣೆಗೆ ಒಳಪಡಿಸಿ ಆತನ ಸ್ವಇಚ್ಚಾ ಹೇಳಿಕೆಯನ್ನು ದಾಖಲಿಸಿಕೊಂಡು ಅಪರಾದ ಪ್ರಕ್ರಿಯೆ ಸಂಹಿತ ಕಲಂ 41 ಎ ರೀತ್ಯ ನೋಟೀಸ್ಸು ಜಾರಿ ಮಾಡಿದ್ದು, ಅಮಾನತು ಪಡಿಸಿಕೊಂಡ ಮಾಲುಗಳನ್ನು ಮಾಲುಪಟ್ಟಿಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ಈ ಕೇಸಿನ ಮುಂದಿನ ತನಿಖೆಯನ್ನು ವೃತ್ತ ನಿರೀಕ್ಷಕರ ಅನುಮತಿ ಪಡೆದು ಚಾಸಾ 8 ರವರಿಗೆ ವಹಿಸಿಕೊಟ್ಟಿದ್ದು, ಆರೋಪಿ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಗುರುತಿಸಿದ್ದು, ಆ ದಿನ ಅಮಾನತು ಪಡಿಸಿದ ಟೆಟ್ರಾ ಪ್ಯಾಕ್ ಗಳು ಮತ್ತು ಹಣವನ್ನು ನೋಡಿ ಮು.1 ರಿಂದ 12 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 10: ಅ.ಸಾ-3, ಸುನೀಲ್ ಬಿ.ಓ., ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ02.06.2024 ರಂದು ತಾನು ಠಾಣೆಯಲ್ಲಿ ಕರ್ತವ್ಯ ನಿರತನಾಗಿದ್ದಾಗ ಸಂಜೆ 7.20 ಗಂಟೆಗೆ ಚಾಸಾ 1 ರವರು ತನ್ನನ್ನು ಚಾಸಾ 4 ರವರನ್ನು ಕರೆದು ಓಂಕಾರೇಶ್ವರ ದೇವಸ್ಥಾನದ ರಸ್ತೆಯಲ್ಲಿ ಅಬಕಾರಿ ದಾಳಿ ಇದೆ ಹೋಗೋಣ ಎಂದು ತಿಳಿಸಿದ್ದು, ನಂತರ ಚಾಸಾ 2 ಮತ್ತು 3 ರವರನ್ನು ಚಾಸಾ 1 ರವರು ಠಾಣೆಗೆ ಕರೆಸಿ ಅವರಿಗೆ ಮಾಹಿತಿ ತಿಳಿಸಿ ದಾಳಿಗೆ ಸಹಕರಿಸುವಂತೆ ಕೇಳಿದ್ದು, ಸದರಿಯವರು ಒಪ್ಪಿದ ಮೇರೆಗೆ ಅವರಿಗೆ ನೋಟೀಸ್ಸು ನೀಡಿದ್ದು, ಆ ನಂತರ ಇಲಾಖಾ ಜೀಪಿನಲ್ಲಿ ಚಾಸಾ 1 ರಿಂದ 3, ತಾನು ಮತ್ತು 4 ರವರು ಎಂ.ಎಂ.ವೃತ್ತದಿಂದ ಓಂಕಾರೇಶ್ವರ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿರುವ ತೆರಿಗೆ ಇಲಾಖೆಯ ಜಂಕ್ಷನ್ ಬಳಿ ಹೋಗಿದ್ದು, ತಾವು ಇಳಿದು ನೋಡಲಾಗಿ ಅಲ್ಲಿ ಒಬ್ಬ ಆಸಾಮಿ ನೀಲಿ ಬಣ್ಣದ ಬಟ್ಟೆ ಬ್ಯಾಗಲ್ಲಿ ಏನೋ ತುಂಬಿಕೊಂಡು ನಿಂತಿದ್ದು ತಮ್ಮನ್ನು ನೋಡಿ ಆತ ಓಡಲು ಪ್ರಯತ್ನ ಪಟ್ಟ ಆಗ ತಾನು ಮತ್ತು ಚಾಸಾ 4 ರವರು ಸೇರಿ ಆತನನ್ನು ಹಿಡಿದು ಚಾಸಾ 1 ರವರ ಮುಂದೆ ಹಾಜರು ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 11: ಅ.ಸಾ-3 ರವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ಚಾಸಾ 1 ರವರು ಆತನ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಆತನ ಹೆಸರು ಪುರುಷೋತ್ತಮ ಮತ್ತು ವಾಸ ನಾರ್ತ ಕೂರ್ಗ ಕ್ಲಬ್ ನ ವಸತಿ ಗೃಹದಲ್ಲಿ ವಾಸವಿದ್ದೇನೆ ಎಂದು ತಿಳಿಸಿದ್ದು, ಆತನ ಕೈಯಲ್ಲಿದ್ದ ಬ್ಯಾಗನ್ನು ಪಂಚರ ಸಮಕ್ಷಮದಲ್ಲಿ ಪರಿಶೀಲಿಸಲಾಗಿ ಅದರಲ್ಲಿ 180 ಎಂ.ಎಲ್ ನ ಬಿಜಾಯ್ಸ್ ಎಂದು ಬರೆದಿದ್ದ 10 ಟೆಟ್ರಾ ಪ್ಯಾಕಗಳು ಇದ್ದು, ಆತನ ಅಂಗಶೋಧನೆ ಮಾಡಲಾಗಿ ಆತನ ಬಲ ಪ್ಯಾಂಟಿನ ಜೇಬಿನಲ್ಲಿ ಮದ್ಯಮಾರಾಟ ಮಾಡಿ ಬಂದಿದ್ದ 100/- ರೂ ಮುಖಬೆಲೆಯ 6 ನೋಟುಗಳು ಇದ್ದು, ಸದರಿ ಮಾಲುಗಳನ್ನು ಸ್ವಾಧೀನ ಹೊಂದಲು ಪರವಾನಿಗೆ ಇದೇಯಾ ಎಂದು ಕೇಳಲಾಗಿ ಆರೋಪಿ ತನ್ನ ಬಳಿ ಯಾವುದೇ ಪರವಾನಿಗೆ ಇಲ್ಲ ಮತ್ತು ಸದರಿ ಮಾಲನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ ಹೊಂದಿದ್ದೇನೆ ಎಂದು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 12: ಅ.ಸಾ-3 ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ಆರೋಪಿಯು ಅಬಕಾರಿ ಕಾಯಿದೆಯನ್ನು ಉಲ್ಲಂಘನೆ ಮಾಡುವ ಕೃತ್ಯವೆಸಗಿದ್ದು, ಆತನ ಸ್ವಾಧೀನದಲ್ಲಿದ್ದ 10 ಬಿಜಾಯ್ಸ ಟೆಟ್ರಾ ಪ್ಯಾಕಗಳನ್ನು ಮತ್ತು ಆರೋಪಿ ಸ್ವಾಧೀನದಲ್ಲಿದ್ದ ಬ್ಯಾಗನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಟಿ ಎಂಬ ಇಂಗ್ಲೀಷ ಅಕ್ಷರದಿಂದ ಮೋಹರು ಮಾಡಿದ್ದು, ಆರೋಪಿ ಸ್ವಾಧೀನದಲ್ಲಿದ್ದ ಹಣವನ್ನು ಒಂದು ಖಾಕಿ ಲಕೋಟೆಗೆ ಹಾಕಿ ಅದನ್ನು ಸಹ ಮೋಹರು ಮಾಡಿದ್ದು, ಮಾಲು ಮತ್ತು ಆರೋಪಿಯನ್ನು ವಶಕ್ಕೆ ಪಡೆದು ರಾತ್ರಿ 8.15 ರಿಂದ 9.35 ಗಂಟೆಯವರಿಗೆ ನಿಪಿ-2 ರಂತೆ ಮಹಜರ ಬರೆದಿದ್ದು, ಮಹಜರ್ ಕಾಲಕ್ಕೆ ಠಾಣಾ ಸೋನಿ ಡಿಜಿಟಲ್ ಹ್ಯಾಂಡಿ ಕ್ಯಾಮರಾ ಮುಖಾಂತರ ನಿಪಿ-3 ರಂತೆ ಸ್ಥಳದ ಫೋಟೊ ತೆಗೆದಿದ್ದು, ನಿಪಿ.3 ರಲ್ಲಿ ಕಾಣುವ ಸ್ಥಳ ಘಟನಾ ಸ್ಥಳವಾಗಿದ್ದು ಅದರಲ್ಲಿ ಚಾಸಾ 1 ರಿಂದ 4 ಮತ್ತು ಆರೋಪಿ ಇದ್ದು, ನಿಪಿ.3 ರಲ್ಲಿ ಕಾಣುವಂತೆ ಆರೋಪಿ ಕೈನಲ್ಲಿ ಅಮಾನತು ಪಡಿಸಿದ ಮಾಲು ಇದ್ದು, ತಾನು ತನಿಖಾಧಿಕಾರಿ ಮುಂದೆ ಘಟನೆ ಸಂಬಂಧ ಹೇಳಿಕೆ ಕೊಟ್ಟಿದ್ದು, ಆರೋಪಿ ನ್ಯಾಯಾಲಯದ ಮುಂದೆ ಇದ್ದು ಆತನನ್ನು ನೋಡಿ ಗುರುತಿಸಿದ್ದು, ಆ ದಿನ ಅಮಾನತು ಪಡಿಸಿದ ಮಾಲು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನೋಡಿ ಮು.ಮ.1 ರಿಂದ 12 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 13: ಅ.ಸಾ-3, ರವರು ತಮ್ಮ ಮುಂದುವರೆದ ಸಾಕ್ಷ್ಯದಲ್ಲಿ, ದಿಃ28.06.2024 ರಂದು ಠಾಣಾ ಕ್ಯಾಮರಾ ಸಹಾಯದಿಂದ ಸ್ಥಳದಲ್ಲಿ ತೆಗೆದ ಫೋಟೋವನ್ನು ಠಾಣೆಯ ಎಸಾರ್ ಕಂಪ್ಯೂಟರ್ ಸಹಾಯದಿಂದ ಫೋಟೋಗಳನ್ನು ವರ್ಗಾಯಿಸಿಕೊಂಡು ಕೆನಾನ್ ಪ್ರಿಂಟರ್ ಸಹಾಯದಿಂದ ನಿಪಿ.3 ನ್ನು ಪ್ರಿಂಟ್ ಹಾಕಿದ್ದು, ಈ ಸಂಬಂಧ ತಾನು ಚಾಸಾ 8 ರವರ ಮುಂದೆ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ.65 ಬಿ ರಿತ್ಯ ನಿಪಿ-6 ರಂತೆ ದೃಢೀಕರಣ ಪತ್ರ ಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 14: ಅ.ಸಾ-4, ಸಿ.ವಿ.ಶ್ರೀಧರ್, ಇವರು ತಮ್ಮ ಸಾಕ್ಷ್ಯದಲ್ಲಿ, ದಿಃ23.06.2024 ರಂದು ಮಾನ್ಯ ವೃತ್ತ ನಿರೀಕ್ಷಕರು ಈ ಕೇಸಿನ ಮುಂದಿನ ತನಿಖೆಯನ್ನು ನಡೆಸಲು ತನ್ನನ್ನು ನೇಮಿಸಿ ಮೌಖಿಕ ಆದೇಶವನ್ನು ಹೊರಡಿಸಿದ್ದರಿಂದ, ಅದೇ ದಿನ ಈ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 1 ರವರಿಂದ ಸ್ವೀಕರಿಸಿ ಪರಿಶೀಲಿಸಿದ್ದು, ದಿಃ28.06.2024 ರಂದು ಚಾಸಾ 2 ರವರಿಂದ 5 ರವರ ಹೇಳಿಕೆಯನ್ನು ದಾಖಲಿಸಿಕೊಂಡು ಕಡತಕ್ಕೆ ಅಳವಡಿಸಿಕೊಂಡಿದ್ದು, ಅದೇ ದಿನ ಚಾಸಾ 5 ರವರಿಂದ ಸಾಕ್ಷ್ಯ ಅಧಿನಿಯಮ ಕಲಂ 65 ಬಿ ರಿತ್ಯ ದೃಢೀಕರಣ ಪತ್ರವನ್ನು ಸ್ವೀಕರಿಸಿ ನಿಪಿ-6 ರಂತೆ ಕಡತಕ್ಕೆ ಅಳವಡಿಸಿಕೊಂಡಿದ್ದು, ಸದರಿ ದೃಢೀಕರಣ ಪತ್ರದ ಜೊತೆ ಫೋಟೋವನ್ನು ಹಾಜರು ಮಾಡಿದ್ದು ಅದನ್ನು ನಿಪಿ-3 ಎಂದು ಗುರುತಿಸಿ ಕಡತಕ್ಕೆ ಅಳವಡಿಸಿಕೊಂಡಿದ್ದು, ಅದೇ ದಿನ ಮಾನ್ಯ ಜಿಲ್ಲಾಧಿಕಾರಿಗಳು ಹೊರಡಿಸಿದ್ದ ಮದ್ಯ ಮಾರಾಟ ನಿಷೇದ ಆದೇಶದ ಯಥಾ ನಕಲನ್ನು ಸ್ವೀಕರಿಸಿ ನಿಪಿ-7 ರಂತೆ ಕಡತಕ್ಕೆ ಅಳವಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 15: ಅ.ಸಾ-4 ಇವರು ತಮ್ಮ ಮುಂದುವರಿದ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ 7 ರವರಿಂದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಸ್ವೀಕರಿಸಿ ನಿಪಿ-8 ರಂತೆ ಕಡತಕ್ಕೆ ಅಳವಡಿಸಿಕೊಂಡಿದ್ದು, ಅಲ್ಲಿಗೆ ಈ ಕೇಸಿನ ತನಿಖೆ ಪೂರ್ಣಗೊಂಡಿದ್ದರಿಂದ ಮತ್ತು ಆರೋಪಿ ವಿರುದ್ದ ಸಾಕಷ್ಟು ಸಾಕ್ಷ್ಯದಾರಗಳು ಇದಿದ್ದರಿಂದ ಅದೇ ದಿನ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರವನ್ನು ನಿವೇದಿಸಿಕೊಂಡಿದ್ದು, ಈ ಕೇಸಿನಲ್ಲಿ ಅಮಾನತು ಪಡಿಸಿದ ಮಾಲು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ನೋಡಿ ಮು.ಮ.1 ರಿಂದ 12 ಎಂದು ಗುರುತಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನಿಮ್ಮ ಹೇಳಿಕೆ ಏನು?

ಉತ್ತರ :

ಪ್ರಶ್ನೆ 16: ನೀನು ಏನನ್ನಾದರೂ ಹೇಳುವುದಿದೆಯೋ ಹೇಗೆ?

ಉತ್ತರ:

ಪ್ರಶ್ನೆ 17: ನಿನ್ನ ಪರವಾಗಿ ಸಾಕ್ಷಿಗಳನ್ನು ವಿಚಾರಣೆ ಮಾಡಿಸುತ್ತೀಯಾ?

ಉತ್ತರ:

(ಸದರಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಆತನು ಕೊಟ್ಟ ಉತ್ತರದಂತೆ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸುತ್ತೇನೆ.)

ದಿನಾಂಕ:

Sd/-xxx
(ಸಿ.ವೀರಭದ್ರಯ್ಯ)
ಹಿರಿಯ ಸಿವಿಲ್ ನ್ಯಾಯಧೀಶರು ಮತ್ತು
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಕೊಡಗು-ಮಡಿಕೇರಿ.